ORIGINAL

# ಕರ್ನಾಟಕ ಸರ್ಕಾರ

## ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ

## 2012–2013ನೇ ಸಾಲಿನ

## ವಾರ್ಷಿಕ ವರದಿಯ ವಿವರಗಳು

## ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ಸಂಬಂಧಿಸಿದ 2012-13ನೇ ಸಾಲಿನ ವಾರ್ಷಿಕ ವರದಿ.

1) **ಮುಖ್ಯ ಧ್ಯೇಯಗಳು ಮತ್ತು ಜವಾಬ್ದಾರಿಗಳು** :-

ಕ್ರಿಮಿನಲ್ ಮೊಕದ್ದಮೆಗಳನ್ನು ಪರಿಣಾಮಕಾರಿಯಾಗಿ ನ್ಯಾಯಾಲಯಗಳಲ್ಲಿ ನಡೆಸಲು ಪ್ರತ್ಯೇಕವಾದ ಮತ್ತು ಸ್ವತಂತ್ರವಾದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯನ್ನು ಅಸ್ತಿತ್ವಕ್ಕೆ ತರಲಾಗಿದೆ.

ಇದಲ್ಲದೆ, ಸರ್ಕಾರಿ ವ್ಯಾಜ್ಯಗಳಿಗೆ ಸಂಬಂಧಪಟ್ಟಂತೆ ರಾಜ್ಯದ ಸಿವಿಲ್ ಜಡ್ಜ್ ನ್ಯಾಯಾಲಯಗಳು ಮತ್ತು ಸಿವಿಲ್ ಜಡ್ಜ್ (ಕಿರಿಯ ಶ್ರೇಣಿ) ಮತ್ತು ಜ್ಯುಡಿಷಯಲ್ ಮ್ಯಾಜಿಸ್ಟ್ರೇಟ್ ಫಸ್ಟ್ ಕ್ಲಾಸ್ ನ್ಯಾಯಾಲಯಗಳಲ್ಲಿ ನಡೆಸಲಾಗುವ ಸಿವಿಲ್ ವ್ಯಾಜ್ಯಗಳ ಮೇಲ್ವಿಚಾರಣೆಯೂ ಕೂಡ ಈ ಇಲಾಖೆಯ ಕಾರ್ಯವ್ಯಾಪ್ತಿಗೊಳಪಟ್ಟಿರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಸಿಎ 07 ಎಆರ್‌ಬಿ 2004 ದಿ: 23/9/2004ರ ಪ್ರಕಾರ ಈ ಇಲಾಖೆಯನ್ನು ಒಳಾಡಳಿತ ಇಲಾಖೆಯ ಕಾರ್ಯವ್ಯಾಪ್ತಿಗೆ ಒಳಪಡಿಸಲಾಗಿರುತ್ತದೆ.

2) **ಮುಖ್ಯ ಕರ್ತವ್ಯಗಳು** :-

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯು ಪ್ರಮುಖವಾಗಿ ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುತ್ತಿದೆ :-

1. ಕ್ರಿಮಿನಲ್ ನ್ಯಾಯಾಲಯಗಳು ಮತ್ತು ಸತ್ರ ನ್ಯಾಯಾಲಯಗಳಲ್ಲಿ ಕ್ರಿಮಿನಲ್ ಮೊಕದ್ದಮೆಗಳಲ್ಲಿ ರಾಜ್ಯದ ಪರವಾಗಿ ಅಭಿಯೋಜನೆಯನ್ನು ನಡೆಸುವ ವ್ಯವಸ್ಥೆ ಮಾಡುವುದು.
2. ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು ಮತ್ತು ಸತ್ರನ್ಯಾಯಾಲಯಗಳು ನೀಡಿದ ತೀರ್ಪುಗಳು ಮತ್ತು ಆದೇಶಗಳನ್ನು ಪರಿಶೀಲಿಸುವುದು ಮತ್ತು ಅಂತಹ ತೀರ್ಪುಗಳು ಮತ್ತು ಆದೇಶಗಳ ವಿರುದ್ಧ ಅರ್ಹವಾದ ಮೊಕದ್ದಮೆಗಳಲ್ಲಿ ಮೇಲ್ಮನವಿ ಸಲ್ಲಿಸಲು ಅಥವಾ ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.
3. ಅಭಿಯೋಗದಿಂದ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಬಂದ ಪ್ರಸ್ತಾವನೆಗಳಿಗೆ ಅಭಿಪ್ರಾಯವನ್ನು ನೀಡುವುದು.
4. ಸಿವಿಲ್ ಜಡ್ಜ್ (ಕಿರಿಯ ಶ್ರೇಣಿ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ಸಂಯುಕ್ತ ನ್ಯಾಯಾಲಯಗಳಿರುವ ತಾಲ್ಲೂಕಿನ ಕೇಂದ್ರಗಳಲ್ಲಿ ರಾಜ್ಯ ಸರ್ಕಾರದ ಪರವಾಗಿ ಸಿವಿಲ್ ವ್ಯಾಜ್ಯಗಳನ್ನು ನಡೆಸುವುದು.
5. ಸಿವಿಲ್ ಜಡ್ಜ್ (ಕಿರಿಯ ಶ್ರೇಣಿ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಸಿವಿಲ್ ವ್ಯಾಜ್ಯಗಳಲ್ಲಿ ನೀಡಿದ ತೀರ್ಪು ಮತ್ತು ಆದೇಶಗಳನ್ನು ಪರಿಶೀಲಿಸಿ ಅರ್ಹವಾದ ಮೊಕದ್ದಮೆಗಳಲ್ಲಿ ಮೇಲ್ಮನವಿ ಸಲ್ಲಿಸಲು ಅಥವಾ ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸುವ ವ್ಯವಸ್ಥೆ ಮಾಡುವುದು.

6. ಕ್ರಿಮಿನಲ್ ಪ್ರಕರಣಗಳಲ್ಲಿ ತನಿಖಾಧಿಕಾರಿಗಳು ಸಲ್ಲಿಸುವ ದೋಷಾರೋಪಣ ಪಟ್ಟಿಗಳನ್ನು ಪರಿಶೀಲಿಸುವುದು.

3) **ಸಂಘಟನೆ:–**

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ನಿರ್ದೇಶಕರು ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. 03 ಅಭಿಯೋಗ ಉಪ ನಿರ್ದೇಶಕರುಗಳು, 02 ಕಾನೂನು ಅಧಿಕಾರಿಗಳು (ಹಿರಿಯ),06 ಕಾನೂನು ಅಧಿಕಾರಿಗಳು (ಕಿರಿಯ), ಒಬ್ಬರು ಕೇಂದ್ರ ಸಹಾಯಕರು, 02 ಆಡಳಿತಾಧಿಕಾರಿಗಳು, 01–ಲೆಕ್ಕ ಪರಿಶೋಧನಾಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಅವರಿಗೆ ಸಹಾಯಕರಾಗಿರುತ್ತಾರೆ.

ಬೆಂಗಳೂರು ನಗರ, ಬೆಂಗಳೂರು ವಿಭಾಗ, ಮೈಸೂರು, ದಾವಣಗೆರೆ, ಮಂಗಳೂರು, ಬೆಳಗಾವಿ ಹಾಗೂ ಗುಲ್ಬರ್ಗಗಳಲ್ಲಿ ಒಟ್ಟು 7 ವಿಭಾಗೀಯ ಕಛೇರಿಗಳು ಇದ್ದು, ಕಾನೂನು ಅಧಿಕಾರಿ (ಹಿರಿಯ)ಇವರು ವಲಯ ಮಟ್ಟದಲ್ಲಿ, ಕಾನೂನು ಅಧಿಕಾರಿ (ಕಿರಿಯ), ಆಡಳಿತಾಧಿಕಾರಿಗಳು ಮತ್ತು ಸಿಬ್ಬಂಧಿವರ್ಗದವರ ಸಹಕಾರದೊಂದಿಗೆ ಕಾರ್ಯನಿರ್ವಹಿಸುತ್ತಿರುತ್ತಾರೆ.

ಜಿಲ್ಲಾ ಮಟ್ಟದಲ್ಲಿ ಸರ್ಕಾರಿ ಅಭಿಯೋಜಕರುಗಳು ಸತ್ರ ನ್ಯಾಯಾಲಯಗಳಲ್ಲಿ, ರಾಜ್ಯದಲ್ಲಿ ಸ್ಥಾಪಿತವಾಗಿರುವ ತ್ವರಿತಗತಿ ನ್ಯಾಯಾಲಯಗಳಲ್ಲಿ ಈ ಇಲಾಖೆಯ ವತಿಯಿಂದ 30 ಸರ್ಕಾರಿ ಅಭಿಯೋಜಕರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಸಿ.ಎಂ.ಎಂ ಮತ್ತು ಸಿ.ಜೆ.ಎಂ ನ್ಯಾಯಾಲಯಗಳಲ್ಲಿ, ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರುಗಳು ಸರ್ಕಾರದ ಪರವಾಗಿ ಕ್ರಿಮಿನಲ್ ಪ್ರಕರಣಗಳನ್ನು ಪ್ರತಿನಿಧಿಸುತ್ತಿರುತ್ತಾರೆ,

ಜಿಲ್ಲಾ ಮಟ್ಟದಲ್ಲಿ ಆರಕ್ಷಕ ಅಧೀಕ್ಷಕರ ಕಛೇರಿಗಳಲ್ಲಿ ತಲಾ ಒಂದು ಕಾನೂನು ಅಧಿಕಾರಿ (ಕಿರಿಯ) ಇವರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಅದೇ ರೀತಿ ಪೋಲೀಸ್ ಆಯುಕ್ತರ ಕಛೇರಿ ಬೆಂಗಳೂರು ನಗರ, ಮೈಸೂರು, ಮಂಗಳೂರು ಮತ್ತು ಹುಬ್ಬಳ್ಳಿ ಇಲ್ಲಿ ಕಾನೂನು ಅಧಿಕಾರಿಗಳು (ಕಿರಿಯ) ಇವರು ಕಾರ್ಯ ನಿರ್ವಹಿಸುತ್ತಿರುತ್ತಾರೆ.

ತಾಲ್ಲೂಕು ಮಟ್ಟದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರುಗಳು, ಸಿವಿಲ್ ಜಡ್ಜ್ (ಕಿ.ವಿ) ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯಗಳಲ್ಲಿ ಕ್ರಿಮಿನಲ್ ಹಾಗೂ ಸಿವಿಲ್ ಪ್ರಕರಣಗಳನ್ನು ಸರ್ಕಾರದ ಪರವಾಗಿ ಪ್ರತಿನಿಧಿಸುತ್ತಿರುತ್ತಾರೆ.

ಸರ್ಕಾರಿ ಅಭಿಯೋಜಕರು: ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು:ಸಹಾಯಕ ಸರ್ಕಾರಿ ಅಭಿಯೋಜಕರುಗಳಿಗೆ ಪೂರಕ ಸಿಬ್ಬಂದಿ ವ್ಯವಸ್ಥೆ ಮಾಡಲಾಗಿರುತ್ತದೆ.

4) <u>ವೃಂದಬಲ:-</u>

ದಿನಾಂಕ:31-03-2013ರಲ್ಲಿ ಇದ್ದಂತೆ ಈ ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳು, ಭರ್ತಿಯಾದ ಹುದ್ದೆಗಳು ಮತ್ತು ಖಾಲಿ ಇರುವ ಹುದ್ದೆಗಳು ಹಾಗೂ ಭರ್ತಿಯಾದ ಹುದ್ದೆಗಳಲ್ಲಿ ಎಸ್.ಸಿ ಮತ್ತು ಎಸ್.ಟಿ. ಹುದ್ದೆಗಳ ವಿವರಗಳ ಮಾಹಿತಿ ಈ ಕೆಳಗಿನಂತಿರುತ್ತದೆ.

| ಕ್ರಮ ಸಂಖ್ಯೆ | ಹುದ್ದೆಯ ವಿವರ | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿಯಾದ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ | ಒಟ್ಟು | ಎಸ್.ಸಿ | ಎಸ್.ಟಿ |
|---|---|---|---|---|---|---|---|
| 01 | 02 | 03 | 04 | 05 | 06 | 07 | 08 |
| 1. | ನಿರ್ದೇಶಕರು | 01 | 01 | – | 01 | – | – |
| 2. | ಅಭಿಯೋಗ ಉಪ ನಿರ್ದೇಶಕರು | 03 | – | 03 | 03 | – | – |
| 3. | ಸ.ಅ/ಕಾ.ಅ.(ಹಿ) | 200 | 130 | 70 | 200 | 28 | 09 |
| 4. | ಹಿ.ಸ.ಸ.ಅ/ ಕಾ.ಅ.(ಕಿ) | 119 | 66 | 53 | 119 | 14 | 02 |
| 5. | ಕೇಂದ್ರ ಸಹಾಯಕರು | 01 | 01 | – | 01 | – | – |
| 6. | ಸ.ಸ.ಅ-ವ-ಸ.ಸ.ವ | 367 | 235 | 132 | 367 | 27 | 05 |
| 7. | ಆಡಳಿತಾಧಿಕಾರಿಗಳು | 10 | 08 | 02 | 10 | 02 | – |
| 8. | ಲೆಕ್ಕಪತ್ರ ಅಧೀಕ್ಷಕರು | 01 | – | 01 | 01 | | – |
| 9. | ಲೆಕ್ಕ ಪರಿಶೋಧನಾಧಿಕಾರಿ | 01 | 01 | – | 01 | – | – |
| 10 | ಅಧೀಕ್ಷಕರು | 36 | 26 | 10 | 36 | 04 | 02 |
| 11 | ಪ್ರ.ದ.ಸ | 64 | 58 | 06 | 64 | 12 | 03 |
| 12 | ಸ.ಗ್ರಂಥಪಾಲಕರು | 01 | – | 01 | 01 | – | – |
| 13 | ಶೀಘ್ರಲಿಪಿಗಾರರು | 203 | 88 | 115 | 203 | 10 | 02 |
| 14 | ಹಿ.ಬೆರಳಚ್ಚುಗಾರರು | 37 | 29 | 08 | 37 | 02 | – |
| 15 | ದ್ವಿ.ದ.ಸ. | 65 | 52 | 13 | 65 | 06 | 02 |
| 16 | ಬೆರಳಚ್ಚುಗಾರರು | 310 | 157 | 153 | 310 | 36 | 08 |
| 17 | ವಾಹನ ಚಾಲಕರು | 04 | 03 | 01 | 04 | 01 | 01 |
| 18 | ತೃತೀಯ ದರ್ಜೆ ಸಹಾಯಕರು | 01 | 01 | – | 01 | 01 | 00 |
| 19 | ಅಟೆಂಡರ್‌ಗಳು | 51 | 45 | 06 | 51 | – | – |
| 20 | ದಲಾಯತರು | 292 | 180 | 112 | 292 | 29 | 05 |
| | ಒಟ್ಟು ಹುದ್ದೆಗಳು | 1767 | 1081 | 686 | 1767 | 172 | 39 |

5) <u>ಕ್ರಿಮಿನಲ್ ಪ್ರಕರಣಗಳ ತೀರ್ಪು ಮತ್ತು ಆದೇಶಗಳ ಪರಿಶೀಲನೆ ಬಗ್ಗೆ ವಿವರಗಳು:-</u>

ದಿನಾಂಕ:01-04-2012 ರಿಂದ ದಿನಾಂಕ:31-03-2013ರ ಅವಧಿಯಲ್ಲಿ ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಲೇವಾರಿಯಾದ ಕ್ರಿಮಿನಲ್ ಪ್ರಕರಣಗಳ ಮಾಹಿತಿ ಹಾಗೂ ಈ ಕಛೇರಿಯಲ್ಲಿ ನ್ಯಾಯಾಲಯದ ತೀರ್ಪುಗಳು ಮತ್ತು ಆದೇಶಗಳನ್ನು ಪರಿಶೀಲಿಸಿ, ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಲು ಅಥವಾ ಪರಿಷ್ಕರಣೆಗೆ ಅರ್ಜಿಯನ್ನು ಸಲ್ಲಿಸಲು ಶಿಫಾರಸ್ಸು ಮಾಡಲಾದ ಕ್ರಿಮಿನಲ್ ಪ್ರಕರಣಗಳ ಅಂಕಿ ಅಂಶಗಳು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| 1. | ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಲೇವಾರಿಯಾದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | 1,46,552 |
| 2. | ವಿಲೇವಾರಿಯಾದ ಕ್ರಿಮಿನಲ್ ಪ್ರಕರಣಗಳಲ್ಲಿ ಆರೋಪಿತರಿಗೆ ಶಿಕ್ಷೆ ವಿಧಿಸಲಾದ ಪ್ರಕರಣಗಳ ಒಟ್ಟು ಸಂಖ್ಯೆ | 24,643 |
| 3. | ಇತರೆ ರೀತಿಯಲ್ಲಿ ಅಂದರೆ ಬಿಡುಗಡೆ, ಡಿಸ್‌ಚಾರ್ಜ್‌ನಲ್ಲಿ ಅಂತಿಮಗೊಂಡ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | 1,21,462 |
| 4. | ದಿನಾಂಕ:01-04-2012 ರಿಂದ 31-03-2013ರ ಅವಧಿಯಲ್ಲಿ ಈ ಇಲಾಖೆಯಲ್ಲಿ ಪರಿಶೀಲಿಸಲಾದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | 52,090 |
| 5. | ನ್ಯಾಯಾಲಯಗಳ ತೀರ್ಪು ಮತ್ತು ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲು ಶಿಫಾರಸ್ಸು ಮಾಡಿದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | 415 |
| 6. | ಪರಿಷ್ಕರಣಕ್ಕೆ ಅರ್ಜಿ ಸಲ್ಲಿಸಲು ಈ ಕಛೇರಿಯಿಂದ ಶಿಫಾರಸ್ಸು ಮಾಡಿದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ: | 32 |
| 7. | ಮೇಲ್ಮನವಿಯನ್ನು ಸಲ್ಲಿಸುವುದಕ್ಕಾಗಲಿ ಅಥವಾ ಪರಿಷ್ಕರಣಕ್ಕೆ ಅರ್ಜಿಸಲ್ಲಿಸುವುದಕ್ಕಾಗಲಿ ಶಿಫಾರಸ್ಸು ಮಾಡಿಲ್ಲದ ಕ್ರಿಮಿನಲ್ ಪ್ರಕರಣಗಳ ಒಟ್ಟು ಸಂಖ್ಯೆ | 51,643 |

### 6) ಸರ್ಕಾರಿ ವ್ಯಾಜ್ಯಗಳು (ಸಿವಿಲ್):-

ದಿನಾಂಕ:01-04-2012ರಿಂದ 31-03-2013ರ ಅವಧಿಯಲ್ಲಿ ಸಿವಿಲ್ ಜಡ್ಜ್ (ಕಿರಿಯ ಶ್ರೇಣಿ) ನ್ಯಾಯಾಲಯಗಳು ಮತ್ತು ಸಂಯುಕ್ತ ನ್ಯಾಯಾಲಯಗಳು ಹೊರಡಿಸಿರುವ ಸಿವಿಲ್ ಮೊಕದ್ದಮೆಗಳ ತೀರ್ಪುಗಳು ಮತ್ತು ಆದೇಶಗಳನ್ನು ಈ ಕಛೇರಿಯಲ್ಲಿ ಪರಿಶೀಲಿಸಿದ್ದು, ಪರಿಶೀಲಿಸಿದ ಬಗ್ಗೆ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| 1. | ದಿನಾಂಕ: 01-04-2012 ರಿಂದ 31-03-2013ರ ಅವಧಿಯಲ್ಲಿ ಪರಿಶೀಲಿಸಲಾದ ಸಿವಿಲ್ ಪ್ರಕರಣಗಳ ಒಟ್ಟು ಸಂಖ್ಯೆ | 4399 |
| 2. | ಮೇಲ್ಮನವಿಯನ್ನು ಸಲ್ಲಿಸಲು ಶಿಫಾರಸ್ಸು ಮಾಡಿರುವ ಸಿವಿಲ್ ಪ್ರಕರಣಗಳ ಒಟ್ಟು ಸಂಖ್ಯೆ | 433 |
| 3. | ಪರಿಷ್ಕರಣೆಗೆ ಅರ್ಜಿ ಸಲ್ಲಿಸಲು ಶಿಫಾರಸ್ಸು ಮಾಡಿದ ಸಿವಿಲ್ ಪ್ರಕರಣಗಳ ಒಟ್ಟು ಸಂಖ್ಯೆ | 10 |
| 4. | ಮೇಲ್ಮನಿಯನ್ನು ಸಲ್ಲಿಸುವುದಕ್ಕಾಗಲಿ ಅಥವಾ ಪರಿಷ್ಕರಣಕ್ಕೆ ಅರ್ಜಿಯನ್ನು ಸಲ್ಲಿಸುವುದಕ್ಕಾಗಲಿ ಶಿಫಾರಸ್ಸು ಮಾಡಿಲ್ಲದ ಸಿವಿಲ್ ಪ್ರಕರಣಗಳ ಒಟ್ಟು ಸಂಖ್ಯೆ | 1753 |
| 5. | ಮೇಲ್ಕಂಡ ಅವಧಿಯಲ್ಲಿ ಸರ್ಕಾರದ ಪರವಾಗಿ ಇತ್ಯರ್ಥಗೊಂಡ ಸಿವಿಲ್ ಪ್ರಕರಣಗಳ ಒಟ್ಟು ಸಂಖ್ಯೆ( ವಜಾ ಆದ ದಾವೆಗಳು) | 550 |

### 7) ಆಡಳಿತ:-

ವರದಿಯ ವರ್ಷದಲ್ಲಿ ಸಮೂಹ 'ಎ' ವೃಂದದಿಂದ -15- ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ(ಹಿರಿಯ) ಹಾಗೂ 17- ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ(ಕಿರಿಯ) ಹಾಗೂ ಸಮೂಹ 'ಬಿ' ವೃಂದದಿಂದ 12 ಸಹಾಯಕ ಸರ್ಕಾರಿ ಅಭಿಯೋಜಕರು, 01-ಆಡಳಿತಾಧಿಕಾರಿ ಇವರುಗಳನ್ನು

ವರ್ಗಾವಣೆ ಮಾಡಲಾಗಿರುತ್ತದೆ. ಸಮೂಹ "ಸಿ" ವೃಂದದಿಂದ ಅಧೀಕ್ಷಕರು–03, ಶೀಘ್ರಲಿಪಿಗಾರರು–02, ಹಿರಿಯ ಬೆರಳಚ್ಚುಗಾರರು–02, ಬೆರಳಚ್ಚುಗಾರರು–06, ದಲಾಯತರು–02 ಇವರನ್ನು ವರ್ಗಾವಣೆ ಮಾಡಲಾಗಿರುತ್ತದೆ.

ವರದಿಯ ವರ್ಷದಲ್ಲಿ 'ಎ' ವೃಂದದಿಂದ –55 ಸರ್ಕಾರಿ ಅಭಿಯೋಜಕರ ಹುದ್ದೆಗಳಿಗೆ, 'ಬಿ' ವೃಂದದಿಂದ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ –20, ಅಧೀಕ್ಷಕರ ವೃಂದದಿಂದ ಆಡಳಿತಾಧಿಕಾರಿ ಹುದ್ದೆಗೆ –07, ದ್ವಿ.ದ.ಸ. ವೃಂದದಿಂದ ಪ್ರ.ದ.ಸ. ವೃಂದಕ್ಕೆ–06, ಹಾಗೂ ದಲಾಯತ ವೃಂದದಿಂದ ಅಟೆಂಡರ್ ವೃಂದಕ್ಕೆ –23 ಹುದ್ದೆಗೆ ಬಡ್ತಿ ನೀಡಲಾಗಿದೆ.

ವರದಿಯ ವರ್ಷದಲ್ಲಿ ಸರ್ಕಾರಿ ಅಭಿಯೋಜಕರ ಹುದ್ದೆ,–01, ಕಾನೂನು ಅಧಿಕಾರಿ (ಕಿರಿಯ) –01, ಶೀಘ್ರಲಿಪಿಗಾರರು–03, ಹಾಗೂ ದಲಾಯತ್ –03 ಹುದ್ದೆಗಳು ಸೃಷ್ಟಿಯಾಗಿರುತ್ತವೆ.

01 ಪ್ರ.ದ.ಸ. ಮತ್ತು 02 ದ್ವಿ.ದ.ಸ. ಹುದ್ದೆಗಳನ್ನು ಅನುಕಂಪದ ಮೂಲಕ ನೇಮಕಾತಿ ಮಾಡಲಾಗಿದೆ.

ವರದಿಯ ವರ್ಷದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಒಇ486 ಪಿಪಿಇ 2011, ದಿ:10–01–2012ರ ಪ್ರಕಾರ ಸಹಾಯಕ ಸರ್ಕಾರಿ ಅಬಿಯೋಜಕರು ವ ಸಹಾಯಕ ಸರ್ಕಾರಿ ವಕೀಲರ ಹಿದ್ದೆಗಳ ನೇಮಕಾತಿಗೆ ಆಯ್ಕೆ ಸಮಿತಿಯನ್ನು ಪುನರ್‌ರಚಿಸಿದ್ದು, 197 ಹುದ್ದೆಗಳಿಗೆ ನೇಮಕಾತಿ ಮಾಡಲು ದಿ:16–05–2012ರ ಅಧಿಸೂಚನೆ ಪ್ರಕಾರ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದು ಅದರ ಸಂಬಂಧವಾಗಿ ದಿನಾಂಕ:16–06–2013ರಂದು ಪ್ರಾಥಮಿಕ ಪರೀಕ್ಷೆಯನ್ನು ನಡೆಸಲಾಗಿದೆ. ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಸರ್ಕಾರದ ಪತ್ರ ಸಂಖ್ಯೆ: ಒಇ:235:ಪಿಪಿಇ:2007, ದಿ:23–10–07ರ ಪ್ರಕಾರ 35 ಬೆರಳಚ್ಚುಗಾರರನ್ನು ಮತ್ತು 51 ದಲಾಯತರನ್ನು ಹಾಗೂ ಸರ್ಕಾರದ ಪತ್ರ ಸಂಖ್ಯೆ: ಒಇ:421:ಪಿಪಿಇ:2006, ದಿ:28–08–2008 ರ ಪ್ರಕಾರ 42 ಶೀಘ್ರಲಿಪಿಗಾರರನ್ನು ಮತ್ತು 22 ಬೆರಳಚ್ಚುಗಾರರನ್ನು ಬಾಹ್ಯ ಮೂಲಗಳಿಂದ ಪಡೆದುಕೊಳ್ಳಲು ಅನುಮತಿಯನ್ನು ನೀಡಲಾಗಿರುತ್ತದೆ. ಸದರಿ ಆದೇಶದ ಪ್ರಕಾರ ಜನವರಿ–2009 ರಿಂದ ಬಾಹ್ಯ ಅಭ್ಯರ್ಥಿಗಳ ಸೇವೆಯನ್ನು ಪಡೆಯಲಾಗಿದೆ. ವರದಿಯ ವರ್ಷದಲ್ಲಿ 61 ಬೆರಳಚ್ಚುಗಾರರು, 62 ದಲಾಯತ್ ಹುದ್ದೆಗಳನ್ನು ಬಾಹ್ಯ ಮೂಲದಿಂದ ಭರ್ತಿ ಮಾಡಲು ಅನುಮತಿ ನೀಡಲಾಗಿರುತ್ತದೆ. 2012ನೇ ವರ್ಷದಲ್ಲಿ 61 ಬೆರಳಚ್ಚುಗಾರರು ಮತ್ತು 62 ದಲಾಯತ್ ಹುದ್ದೆಗಳನ್ನು ಬಾಹ್ಯ ಮೂಲದಿಂದ ಭರ್ತಿ ಮಾಡಲು ಅನುಮತಿ ನೀಡಲಾಗಿರುತ್ತದೆ. ಸುಮಾರು 232 ಬಾಹ್ಯ ಮೂಲದ ಅಭ್ಯರ್ಥಿಗಳು ಸೇವೆ ಸಲ್ಲಿಸುತ್ತಿರುತ್ತಾರೆ.

1/07/2013

ದಿನಾಂಕ: 01–07–2013
ಸ್ಥಳ: ಬೆಂಗಳೂರು

(ಚಂದ್ರಶೇಖರ್ ಜಿ. ಹಿರೇಮಠ)
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು (ಪ್ರ)
ಬೆಂಗಳೂರು

# ಕರ್ನಾಟಕ ಸರ್ಕಾರ

## ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ

## 2013–2014ನೇ ಸಾಲಿನ

## ನಿರ್ವಹಣಾ ಮುಂಗಡದ ವಿವರಗಳು

## ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ಸಂಬಂಧಿಸಿದ 2013–2014ನೇ ಸಾಲಿನ ನಿರ್ವಹಣಾ ಮುಂಗಡದ ವಿವರಗಳು

(1) **2012–13ನೇ ಸಾಲಿನಲ್ಲಿ ಪ್ರಗತಿಯ ವರದಿ:–**

2012–13ರ ಸಾಲಿನಲ್ಲಿ ಕಛೇರಿಯ ಆಧುನೀಕರಣ ಯೋಜನೆ ಅಡಿಯಲ್ಲಿ ಯಾವುದೇ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. 051–ಸಾಮಾನ್ಯ ವೆಚ್ಚಗಳು ಲೆಕ್ಕ ಶೀರ್ಷಿಕೆಯಲ್ಲಿ ನೀಡಿದ ಅನುದಾನದಿಂದ 05 ಗಣಕಯಂತ್ರಗಳನ್ನು ಮತ್ತು 05 ಪ್ರಿಂಟರ್ ಗಳನ್ನು ಖರೀದಿಸಲಾಗಿದೆ.

13ನೇ ಆರ್ಥಿಕ ಆಯೋಗದಡಿಯಲ್ಲಿ ಸರ್ಕಾರವು ಅಭಿಯೋಜಕರಿಗೆ ತರಬೇತಿ ನೀಡುವ ನಿಟ್ಟಿನಲ್ಲಿ, ಇಲಾಖೆಯು ಸಲ್ಲಿಸಿದ್ದ ಕಾರ್ಯ ಯೋಜನೆಯನ್ನು ಅಂಗೀಕರಿಸಿ, 05 ವರ್ಷಗಳ ಯೋಜನೆಗೆ ರೂ. 8.20 ಕೋಟಿ ನೀಡಲು ಒಪ್ಪಿರುತ್ತದೆ. (ಸರ್ಕಾರದ ಆದೇಶ ಸಂಖ್ಯೆ ಲಾ 231 ಎಲ್ಎಸಿ 2010, ದಿನಾಂಕ 28.01.2011) ಹಾಗೂ 2010–11ರಿಂದ 2012–13ರ ವರೆಗೆ ರೂ. 5, 34, 00, 000/– ಬಿಡುಗಡೆ ಮಾಡಿದ್ದು ಇಲ್ಲಿಯವರೆಗೆ ರೂ.3,88,53,382/– ವೆಚ್ಚವಾಗಿರುತ್ತದೆ. 45 ದಿನಗಳ ಅವಧಿಯ ತರಬೇತಿಯನ್ನು, 143 ಅಭಿಯೋಜಕರುಗಳಿಗೆ ಕರ್ನಾಟಕ ಜುಡಿಷಿಯಲ್ ಅಕಾಡಮಿಯಲ್ಲಿ ನೀಡಲಾಗಿದೆ. ಅಲ್ಲದೆ 02 ದಿನಗಳ 06 ಕಾರ್ಯಾಗಾರಗಳನ್ನು ಬೆಂಗಳೂರು, ದಾವಣಗೆರೆ, ಗುಲಬರ್ಗಾ ಮತ್ತು ಬೆಳಗಾವಿ ವಲಯಗಳಲ್ಲಿ ಆಯೋಜಿಸಿದ್ದು ಇಲಾಖೆಯ ಅಭಿಯೋಜನಾಧಿಕಾರಿಗಳು ಕಾರ್ಯಾಗಾರದ ಲಾಭವನ್ನು ಪಡೆದುಕೊಂಡಿದ್ದಾರೆ. ಇದಲ್ಲದೆ ಒಂದು ದಿನದ 08 ಕಾರ್ಯಾಗಾರಗಳನ್ನು ಆಯೋಜಿಸಿದ್ದು ಅದರಲ್ಲಿ 400ಕ್ಕೂ ಹೆಚ್ಚು ಅಭಿಯೋಜಕರಿಗೆ ಡಿ.ಎನ್.ಎ. ಕುರಿತಂತೆ ಉತ್ತಮ ಮಟ್ಟದ ತರಬೇತಿಯನ್ನು ನೀಡಲಾಗಿರುತ್ತದೆ.

(2) **2013–14ನೇ ಸಾಲಿನ ಆಯವ್ಯಯ ನಿರ್ವಹಣಾ ಮುಂಗಡದ ವಿವರಗಳು:–**

ಈ ಇಲಾಖೆಯ ಅಧಿಕಾರಿಗಳ, ಸಿಬ್ಬಂದಿವರ್ಗದವರ ವೇತನ ಮತ್ತು ಭತ್ಯೆ ಹಾಗೂ ಕಛೇರಿ ನಿರ್ವಹಣಾ ವೆಚ್ಚ ಮತ್ತು ಇತರೆ ವೆಚ್ಚಗಳನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಯಿಂದ ಭರಿಸಲಾಗುತ್ತಿದೆ.

2014– ನ್ಯಾಯ ಪರಿಪಾಲನೆ

114– ಕಾನೂನು ಸಲಹೆಗಾರರು ಹಾಗೂ ಸಮೂಪದೇಶಕರು

02– ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು.

## ಯೋಜನೇತರ

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ 2014-114-0-02 | 2012-13ನೇ ಸಾಲಿನ ಆಯವ್ಯದಲ್ಲಿ ಮಾಡಿರುವ ಅವಕಾಶ | 2012-13ರ ಸಾಲಿನಲ್ಲಿ ವೆಚ್ಚ ಮಾಡಿದ ಮೊತ್ತ |
|---|---|---|---|
| 01 | 02 | 03 | 04 |
| 1. | 002- ಅಧಿಕಾರಿಗಳ ವೇತನ | 10,71,09,000 | 15,01,27,176 |
| 2. | 003- ಸಿಬ್ಬಂದಿ ವೇತನ | 9,23,70,000 | 15,11,70,428 |
| 3. | 004 ಮಧ್ಯಂತರ ಪರಿಹಾರ | 2,99,21,000 | 63,28,352 |
| 4, | 011- ತುಟ್ಟಿಭತ್ಯೆ | 16,75,62,000 | 4,21,23,226 |
| 5. | 014- ಇತರೇ ಭತ್ಯೆ | 7,88,22,000 | 7,72,49,747 |
| 6. | 020- ವೈದ್ಯಕೀಯ ಭತ್ಯೆ | 9,94,000 | 7,61,770 |
| 7. | 021- ವೈದ್ಯಕೀಯ ವೆಚ್ಚ ಮರು ಪಾವತಿ | 60,82,000 | 25,92,741 |
| 8. | 041- ಪ್ರಯಾಣ ವೆಚ್ಚಗಳು | 20,00,000 | 19,84,107 |
| 9. | 051- ಸಾಮಾನ್ಯ ವೆಚ್ಚಗಳು | 1,50,00,000 | 1,12,40,356 |
| 10. | 052- ದೂರವಾಣಿ ವೆಚ್ಚಗಳು | 7,96,000 | 3,90,914 |
| 11. | 053- ಪಿಠೋಪಕರಣ ಖರೀದಿ | 2,00,000 | - |
| 12. | 059- ಇತರ ಖರ್ಚು | 1,45,00,000 | 1,43,73,533 |
| 13. | 071- ಕಟ್ಟಡ ವೆಚ್ಚಗಳು | 1,36,82,000 | 1,33,58,357 |
| 14. | 101- ಸಹಾಯ ಅನುದಾನ | 5,63,000 | 5,63,000 |
| 15. | 180- ಯಂತ್ರೋಪಕರಣಗಳು ಮತ್ತು ಸಾಧನ ಸಾಮಗ್ರಿಗಳು | 1,000 | - |
| 16. | 195- ಸಾರಿಗೆ ವೆಚ್ಚಗಳು | 8,82,000 | 5,84,149 |
| | ಒಟ್ಟು | 53,04,84,000 | 47,28,47,856 |

-2

## 2013–2014ನೇ ಸಾಲಿನ ಆಯವ್ಯಯಗಳ ವಿವರಗಳು

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ 2014–114–0–02 | 2013–14ನೇ ಸಾಲಿನ ಆಯವ್ಯಯದಲ್ಲಿ ಮಾಡಿರುವ ಅವಕಾಶ |
|---|---|---|
| 01 | 02 | 03 |
| 1. | 002– ಅಧಿಕಾರಿಗಳ ವೇತನ | 19,93,55,000 |
| 2. | 003– ಸಿಬ್ಬಂದಿ ವೇತನ | 16,47,39,000 |
| 3. | 004 ಮಧ್ಯಂತರ ಪರಿಹಾರ | – |
| 4, | 011– ತುಟ್ಟಿಭತ್ಯೆ | 5,09,73,000 |
| 5. | 014– ಇತರೇ ಭತ್ಯೆ | 10,77,55,000 |
| 6. | 020– ವೈದ್ಯಕೀಯ ಭತ್ಯೆ | 7,59,000 |
| 7. | 021– ವೈದ್ಯಕೀಯ ವೆಚ್ಚ ಮರು ಪಾವತಿ | 67,26,000 |
| 8. | 041– ಪ್ರಯಾಣ ವೆಚ್ಚಗಳು | 15,60,000 |
| 9. | 051– ಸಾಮಾನ್ಯ ವೆಚ್ಚಗಳು | 1,56,00,000 |
| 10. | 052– ದೂರವಾಣಿ ವೆಚ್ಚಗಳು | 7,96,000 |
| 11. | 053– ಪಿಠೋಪಕರಣ ಖರೀದಿ | 2,00,000 |
| 12. | 059– ಇತರ ಖರ್ಚು | 1,50,00,000 |
| 13. | 071– ಕಟ್ಟಡ ವೆಚ್ಚಗಳು | 1,47,49,000 |
| 14. | 101– ಸಹಾಯ ಅನುದಾನ | 1,000 |
| 15. | 180– ಯಂತ್ರೋಪಕರಣಗಳು ಮತ್ತು ಸಾಧನ ಸಾಮಗ್ರಿಗಳು | 1,000 |
| 16. | 195– ಸಾರಿಗೆ ವೆಚ್ಚಗಳು | 7,44,000 |
| | **ಒಟ್ಟು** | 57,89,58,000 |

ದಿನಾಂಕ: 01–07–2013
ಸ್ಥಳ: ಬೆಂಗಳೂರು

1/07/2013

(ಚಂದ್ರಶೇಖರ್ ಜಿ. ಹಿರೇಮಠ)
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು (ಪ್ರ)
ಬೆಂಗಳೂರು

# PREFORMANCE REPORT FOR THE YEAR 2013-2014 PERTAINING TO DEPARTMENT OF PROSECUTIONS AND GOVERNMENT LITIGATION

1. PROGRESS REPORT DURING THE YEAR 2012-13

During the year 2012-2013 under the Office Modernization Scheme no grants have been sanctioned. However under the budget provisions for the year 2012-2013. Under the head, 051 - General Expenses 05 computers and 05 printers have been purchased.

Under the 13th Finance Commission recommendations, to train the Prosecutors in Karnataka the Government have approved the Action Plan submitted by the department and has agreed to provide a total grant of Rupees `8.2 Crores for the 05 year plan. 143 Prosecutors have been trained at the State Judicial Academy, Bangalore for a period of 45 days each in 3 Batches. During the period 2010-2011 to 2012-2013 a sum of Rupees 5,34,00,000/- has been released and so far, Rupees 3,88,53,382/- has been spent. 06 Workshops have been organized at Bangalore, Davangere, Gulbarga & Belgaum Divisions and over 400 Prosecutors have been benefited with the knowledge of latest developments in DNA FINGER PRINT PROFILING.

2. PARTICULARS RELATING TO PERFORMANCE BUDGET FOR THE YEAR 2013-2014:-

There is no Plan Scheme in this Department. The pay and allowances of officers/staff and office expenditure and other allowances are being drawn under the following Head of Account.

2014-Administration of Justice<br>
114-Legal Advisors & Counsels<br>
02-Director of Prosecutions and<br>
Government Litigation,

## Non-Plan

| Sl.No. | Head of Account 2014-00-114-02 | Budget provision For the year 2012-2013 | Total Expenditure for the year 2012-13 |
|---|---|---|---|
| 01 | 02 | 03 | 04 |
| 1. | 002-Officers Salary | 10,71,09,000 | 15,01,27,176 |
| 2. | 003-Staff Salary | 9,23,70,000 | 15,11,70,428 |
| 3. | 004-Interim Relief | 2,99,21,000 | 63,28,352 |
| 4. | 011-Dearness Allowance | 16,75,62,000 | 4,21,23,226 |
| 5. | 014-Other Allowance | 7,88,22,000 | 7,72,49,747 |
| 6. | 020- Medical Allowance | 9,94,000 | 7,61,770 |
| 7. | 021- Medical re-imbursement | 60,82,000 | 25,92,741 |
| 8. | 041-Travel Expenses | 20,00,000 | 19,84,107 |
| 9. | 051-General Expenses | 1,50,00,000 | 1,12,40,356 |
| 10. | 052-Telephone Charges | 7,96,000 | 3,90,914 |
| 11. | 053- Purchase of Furniture | 2,00,000 | - |
| 12. | 059-Other Expenditure | 1,45,00,000 | 1,43,73,533 |
| 13. | 071-Building Expenses | 1,36,82,000 | 1,33,58,357 |
| 14. | 101-Grants in Aid | 5,63,000 | 5,63,000 |
| 15. | 180-Machiner and Equipments | 1,000 | - |
| 16. | 195-Transport Expenses | 8,82,000 | 5,84,149 |
| | TOTAL | 53,04,84,000 | 47,28,47,856 |

- 3

2014-Administration of Justice
114-Legal Advisors & Counsels
02-Director of Prosecutions and
Government Litigation,

Non-Plan

| Sl. No. | Head of Account 2014-00-114-02 | Budget provision made by the Govt. For the year 2013-2014 (in lakhs) |
|---|---|---|
| 01 | 02 | 03 |
| 1. | 002-Officers Salary | 19,93,55,000 |
| 2. | 003-Staff Salary | 16,47,39,000 |
| 3. | 004-Interim Relief | - |
| 4. | 011-Dearness Allowance | 5,09,73,000 |
| 5. | 014-Other Allowance | 10,77,55,000 |
| 6. | 020- Medical Allowance | 7,59,000 |
| 7. | 021- Medical re-imbursement | 67,26,000 |
| 8. | 041-Travel Expenses | 15,60,000 |
| 9. | 051-General Expenses | 1,56,00,000 |
| 10. | 052-Telephone Charges | 7,96,000 |
| 11. | 053- Purchase of Furniture | 2,00,000 |
| 12. | 059-Other Expenditure | 1,50,00,000 |
| 13. | 071-Building Expenses | 1,47,49,000 |
| 14. | 101-Grants in Aid | 1,000 |
| 15. | 180-Machiner and Equipments | 1,000 |
| 16. | 195-Transport Expenses | 7,44,000 |
| | TOTAL | 57,89,58,000 |

Date: 01-07-2013
Bangalore

(Chandrashekhar G Hiremath)
Director of Prosecutions & Govt.
Litigation (I/c)
Bangalore